ಎಂ.ವಿ.ಸಿ. ನಂಃ 2505/2025
ಆರ್.ಡಬ್ಲ್ಯೂ-1 (ಅಮ್ಮಣ್ಣಾ)

ದಿನಾಂಕ: 23-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಮ್.ಎ.ಎಚ್. ಎದುರುದಾರ ಪರ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

**ಪಾಟೀಸವಾಲುಃ ಶ್ರೀ.ವಾಯ್.ಎಸ್.ಎಚ್. ಅರ್ಜಿದಾರ ಪರ ವಕೀಲರಿಂದಃ**

ದಿನಾಂಕ 17/07/2025 ರಂದು ಬಸ್ಸ ನಂ.KA-23/F-782ಕ್ಕೆ ನಾನು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ದಿವಸ ನಾವು ಗೋಕಾಕನಿಂದ ತಳಕಟ್ನಾಳಗೆ ಹೋಗುತ್ತಿದ್ದೆವು. ಗೋಕಾಕ-ಯರಗಟ್ಟಿ ರಸ್ತೆಯಲ್ಲಿ ದುಂಡಾನಟ್ಟಿಯ ಬಳಿ ಬಸ್ಸ ಬಂದ ಬಿದ್ದಿತ್ತು. ಬಸ್ಸಿನ ಗೇರನಲ್ಲಿ ಸಮಸ್ಯೆ ಆಗಿದ್ದರಿಂದ ಬಸ್ಸ ಬಂದ ಬಿದ್ದರುತ್ತದೆ. ಗೇರ ಸಮಸ್ಯೆ ಇದ್ದಾಗ ಬಸ್ಸ ಮುಂದೆ ಚಲಿಸುವುದಿಲ್ಲ ಅದನ್ನು ಒತ್ತಿ ಮುಂದೆ ಚಲಿಸಬೇಕೆಂದರೆ ಸರಿ.

2. ನಿಪಿ-4ರಲ್ಲಿ ನಾವು ಬಸ್ಸ ನಿಲ್ಲಿಸಿದ ಸ್ಥಳ ತೋರಿಸಲಾಗಿದೆ ಎಂದರೆ ಸರಿಯಲ್ಲ. ಸಂಜೆ 07.40 ಗಂಟೆಗೆ ಬಸ್ಸ ನಂ.KA-23/F-782 ಬಂದ ಬಿದ್ದಿರುತ್ತದೆ ನಂತರ ನಾನು ಈ ವಿಷಯವನ್ನು ಗೋಕಾಕ ಡಿಪೋ ಮ್ಯಾನೇಜರಗೆ ತಿಳಿಸಿದ

ಮೇಲೆ ರಾತ್ರಿ 09.00ಗಂಟೆ ಸುಮಾರಿಗೆ ಬದಲಿ ಬಸ್ಸ ಕಳುಹಿಸಿದ್ದು, ಪ್ರಯಾಣಿಕರನ್ನು ಬದಲಿ ಬಸ್ಸಿನಲ್ಲಿ ಹತ್ತಿಸಿಕೊಂಡು ನಾನು ಹೋಗಿರುತ್ತೇನೆ. ನಂತರ ರಾತ್ರಿ 12.00ಗಂಟೆಗೆ ನಮ್ಮ ಇಲಾಖೆಯ ಭದ್ರತಾ ರಕ್ಷಕರು ನಾವು ನಿಲ್ಲಿಸಿದ ಬಸ್ಸಗೆ ಮೋಟರ ಸೈಕಲ ಚಾಲಕ ಅಪಘಾತ ಪಡಿಸಿರುತ್ತಾರೆ ಎಂದು ನಮಗೆ ತಿಳಿಸಿರುತ್ತಾರೆ.

3. ಬಸ್ಸ ಬಂದ ಮಾಡಿದ ನಂತರ ಬಸ್ಸಿನ ಇಂಡಿಕೇಟರ್ ಚಾಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಂಜೆ 07.45 ಗಂಟೆಯಿಂದ ಅಪಘಾತ ಆಗುವವರೆಗು ಅದರೆ ರಾತ್ರಿ 11.00 ಗಂಟೆವರೆಗೆ ಬ್ಯಾಟ್ರಿ ಮೇಲೆ ಬಸ್ಸಿನ ಇಂಡಿಕೇಟರ್ ಚಾಲು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಬಸ್ಸಿನ ಹಿಂದಿನ ಭಾಗದಲ್ಲಿ ತ್ರಿಕೋಣ ಆಕಾರಲ್ಲಿರುವ ಇಂಡಿಕೇಟರ್ ಇರಲಿಲ್ಲ ಎಂದರೆ ಸರಿ. ರಸ್ತೆಯ ಮಧ್ಯದಲ್ಲಿರುವ ಬಿಳಿ ಪಟ್ಟಿಯನ್ನು ದಾಟಿ ಬಸ್ಸು ಬಲಗಡೆ ನಿಂತಿತ್ತು ಎಂದರೆ ಸರಿಯಲ್ಲ.

4. ಬಸ್ಸು ಬಂದು ಬಿದ್ದ ನಂತರ ರಸ್ತೆಯಲ್ಲಿ ಬಸ್ಸಿನ ಹಿಂದಿನ ಭಾಗದಲ್ಲಿ ಯಾವುದೇ ಸೂಚನಾ ಫಲಕ ಹಚ್ಚಿಲ್ಲ ಎಂದರೆ ಸಾಕ್ಷಿದಾರರು ತಾವು ಕಂಟಿ ಹಂಚಿದ್ದಾಗಿ ಹೇಳುತ್ತಾರೆ. ಬಂದ ಬಿದ್ದ ಬಸ್ಸ ಸರಿ ಮಾಡಲು ಬಂದ ಮೆಕ್ಯಾನಿಕ್ ಎಷ್ಟು ಗಂಟೆಯವರೆಗು ಸ್ಥಳದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. ಬದಲಿ ಬಸ್ಸು ಬಂದ ನಂತರ ಪ್ರಯಾಣಿಕರನ್ನು ಬದಲಿ ಬಸ್ಸನಲ್ಲಿ ಕರೆದುಕೊಂಡು ಹೋದ

ಮೇಲೆ ರಸ್ತೆಯ ಮೇಲೆ ಬಸ್ಸ ಕೆಟ್ಟು ನಿಂತಿದೆ ಎಂದು ಕೈಸನ್ನೆ ಮಾಡಿ ಹೇಳಲು ಯಾರೂ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ಬಸ್ಸ ಕೆಟ್ಟು ನಿಂತ ಸ್ಥಳದಲ್ಲಿ ಬೀದಿ ದೀಪದ ಕಂಬಗಳು ಇರಲಿಲ್ಲ. ಬಸ್ಸ ನಿಂತ ಸ್ಥಳದಿಂದ 10ಅಡಿ ದೂರದಲ್ಲಿ ಕಲ್ಲುಗಳನ್ನು ಹಚ್ಚಿದ್ದೆ. ಬಸ್ಸ ನಿಂತ ಸ್ಥಳದಲ್ಲಿ ನಾವು ಯಾವುದೇ ಕಲ್ಲುಗಳನ್ನು ಹಚ್ಚಿರಲಿಲ್ಲ ಎಂದರೆ ಸರಿಯಲ್ಲ. ಬಸ್ಸನ್ನು ನಾವು ನಿರ್ಲಕ್ಷತನದಿಂದ ರಸ್ತೆಯ ಮೇಲೆ ನಿಲ್ಲಿಸಿದ್ದಕ್ಕಾಗಿ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಬಸ್ಸನ್ನು ನಾವು ರಸ್ತೆಯ ಬದಿಗೆ ನಿಲ್ಲಿಸಿದ್ದೆವು ಮತ್ತು ಬಸ್ಸಿನ ಹಿಂದೆ ಕಲ್ಲುಗಳನ್ನು ಇಟ್ಟು ಕಂಟಿ ಹಾಕಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ